**ದಿನಾಂಕ 10.12.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪ್ರತಿವಾದಿ 3, 6, 8 ರಿಂದ 11 ರವರ ಪಾಟೀ ಸವಾಲುಃ ಶ್ರೀ ಹೆಚ್.ಎಸ್.ಎ ವಕೀಲರಿಂದ**

1 ನೇ ವಾದಿಯು ನನ್ನ ಗಂಡ ತೀರಿ ಹೋದ ನಂತರ ನನ್ನನ್ನು ನೋಡಿಕೊಳ್ಳುತ್ತಾರೆ. ನಾನು ಕಾಮಸಮುದ್ರ ಮತ್ತು 1 ನೇ ವಾದಿಯ ಮನೆಯಲ್ಲಿ ವಾಸ ಇರುತ್ತೇನೆ. ನನ್ನ ಗಂಡ ತೀರಿ ಹೋಗಿ 17 ವರ್ಷ ಆಯಿತು. ಉಮೇಶನನ್ನು ನಾವು 1 ವರ್ಷ ಮಗು ಇದ್ದಾಗಿನಿಂದಲೂ ಸಾಕಿರುವುದಿಲ್ಲ ಸಾಕ್ಷಿ ಸ್ವತಃ ಅವರ ತಂದೆಯೇ ಸಾಕಿದ್ದರು ಎಂದು ಹೇಳುತ್ತಾರೆ. ನನಗೆ ಮಕ್ಕಳು ಇಲ್ಲ. ಶಿವರಾಜುರವರಿಗೆ ಮಾತ್ರ ಮಕ್ಕಳು ಇದ್ದರು. ಸೋಮಶೇಖರವರಿಗೂ ಮಕ್ಕಳು ಇರಲಿಲ್ಲ. ಶಿವರಾಜುರವರಿಗೆ ಇಬ್ಬರು ಗಂಡು ಮಕ್ಕಳು. ಶಿವರಾಜುರವರಿಗೆ ಇಬ್ಬರು ಗಂಡು ಮಕ್ಕಳು ಇರುವುದರಿಂದ ನನಗೆ ಮಕ್ಕಳು ಇಲ್ಲದೇ ಇರುವುದರಿಂದ ಉಮೇಶನನ್ನು ನನಗೆ ದತ್ತು ಕೊಟ್ಟಿದ್ದರು ಎಂದರೆ ಸರಿಯಲ್ಲ. ಉಮೇಶನ ಮದುವೆಯನ್ನು ಅವರ ತಂದೆಯೇ ಮಾಡಿದರು. ಉಮೇಶನನ್ನು ನಾನು ದತ್ತು ಪಡೆದುಕೊಂಡಿರುವುದರಿಂದ ನಾವೇ ಮದುವೆ ಮಾಡಿದ್ದೇವೆ ಎಂದರೆ ಸರಿಯಲ್ಲ ಅವರ ನೈಸರ್ಗಿಕ ತಂದೆ ತಾಯಿಯನ್ನು ಕರೆಯದೇ ನಾನೇ ಮದುವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಉಮೇಶನ ಅಂತಿಮ ತಿಥಿ ಕಾರ್ಯವನ್ನು ನಾನೇ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ 1 ನೇ ವಾದಿಯ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಗಳಲ್ಲಿ ಭಾಗ ಆಗಿದೆ ಎಂದು ನಾನು ಹೇಳಿರುವುದಿಲ್ಲ. ಮಹದೇವಯ್ಯ, ಸೋಮಶೇಖರ ಮತ್ತು ಶಿವರಾಜುರವರ ನಡುವೆ ಭಾಗ ಆಗಿರಲಿಲ್ಲ. ಗೊಂಧಿಮಲ್ಲೇನಹಳ್ಳಿಯಲ್ಲಿದ್ದ ಸರ್ವೆ ನಂಬರ್ 63/1 ಆಸ್ತಿಯನ್ನು ನನ್ನ ಗಂಡ ಜೀವಂತ ಇದ್ದಾಗ ರಂಗಣ್ಣನವರಿಗೆ ಭೋಗ್ಯ ಮಾಡಿದ್ದರು. ಈಗಲೂ ಈ ಆಸ್ತಿಯನ್ನು ರಂಗಣ್ಣನವರ ಕುಟುಂಬದವರು ಕೃಷಿ ಮಾಡುತ್ತಿದ್ದಾರೆ. ಸೋಮಶೇಖರ ಮತ್ತು ಶಿವರಾಜುರವರ ಒಪ್ಪಿಗೆ ಪಡೆಯದೇ ನನ್ನ ಗಂಡ ಮಹದೇವಯ್ಯ ಗೊಂಧಿಮಲ್ಲೇನಹಳ್ಳಿಯ ಜಾಗವನ್ನು ನಿವೇಶನ ಖರೀದಿಸುವ ಉದ್ದೇಶಕ್ಕಾಗಿ ಭೋಗ್ಯ ಮಾಡಿದ್ದರು. ನಾವು ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡಿದ್ದೇವೆ. ಸೋಮಶೇಖರ ಮತ್ತು ಶಿವರಾಜುರವರುಗಳು ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡಿದ್ದಾರೆ. ಎಲ್ಲಾ ಮನೆಯ ಖರ್ಚನ್ನು ಪ್ರತ್ಯೇಕವಾಗಿ ಅವರವರೇ ಭರಿಸಿಕೊಂಡಿದ್ದೇವೆ. ಶಿವರಾಜುರವರ ಹೆಣ್ಣು ಮಕ್ಕಳ ಮದುವೆಯನ್ನು ಅವರೇ ಮಾಡಿದರು. ನನ್ನ ಗಂಡ ಮಹದೇವಯ್ಯ ಮತ್ತು ನನ್ನ ಮೈದ ಸೋಮಶೇಖರವರು ಶಿವರಾಜುರವರ ಹೆಣ್ಣು ಮಕ್ಕಳಿಗೆ ಸಹಾಯ ಮಾಡಿಲ್ಲ. ಶಿವರಾಜು ಮತ್ತು ಸೋಮಶೇಖರರವರು ನಮ್ಮನ್ನು ಕೇಳದೇ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದರೆ. ನಮ್ಮ ಹೆಸರಿನಲ್ಲಿರುವ ಜಮೀನುಗಳನ್ನು ನಾನು ಮಾರಾಟ ಮಾಡಿಲ್ಲ. ಶಿವರಾಜು ಮತ್ತು ಸೋಮಶೇಖರವರ ಹೆಸರಿಗೆ ಖಾತೆ ಬರುವಾಗ ನಾನು ತಕರಾರು ಮಾಡಿಲ್ಲ. ಶಿವರಾಜು ಮತ್ತು ಸೋಮಶೇಖರವರು ಜಮೀನನ್ನು ಮಾರಾಟ ಮಾಡುವಾಗ ತಕರಾರುಮಾಡಿದ್ದಾರಾ ಎಂದರೆ ಸಾಕ್ಷಿ ನಮ್ಮನ್ನು ಕೇಳಿಲ್ಲ ಎಂದು ಹೇಳುತ್ತಾರೆ. ಅವರು ಮಾರಾಟ ಮಾಡಿದ ಜಮೀನುಗಳ ಮೇಲೆ ನಾವು ದಾವೆ ಹಾಕಿಲ್ಲ. ನನಗೆ ಗೊತ್ತಾಗದ ಕಾರಣ ದಾವೆ ಮಾಡಿಲಿಲ್ಲ. ಈಗಲೂ ದಾವೆ ಹಾಕುವುದಿಲ್ಲ. ನನ್ನ ಗಂಡ ಮಹದೇವಯ್ಯ ಮೈದುನರಾದ ಶಿವರಾಜು ಮತ್ತು ಸೋಮಶೇಖರವರ ನಡುವೆ ವಿಭಾಗ ಆಗಿರುವ ವಿಚಾರ ಗೊತ್ತಿರುವುದರಿಂದ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ. ಸೋಮಶೇಖರ ಮತ್ತು ಆತನ ಹೆಂಡತಿ ಜಾನಕಿ ಇಬ್ಬರೂ ತೀರಿ ಹೋಗಿದ್ದಾರೆ. ಅವರ ಇಬ್ಬರ ಅಂತಿಮ ಕಾರ್ಯವನ್ನು ಶಿವರಾಜುರವರ ಮಗ ಶಿವಪ್ಪ

ಮಾಡಿದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ನನ್ನ ಗಂಡ ಹೆಸರಿನಲ್ಲಿದ್ದ ಸರ್ವೆ ನಂಬರ್ ಮತ್ತು ಅವುಗಳ ವಿಸ್ತೀರ್ಣ ನನಗೆ ಹೇಳಲು ಗೊತ್ತಾಗುವುದಿಲ್ಲ. ಮೈಲಾರಯ್ಯನವರ ಮಗ ಮಹದೇವಯ್ಯನ ಧರ್ಮಪತ್ನಿ ಚಿಕ್ಕಮಲ್ಲಮ್ಮ ಎಂದರೆ ನಾನು. ಮಹದೇವಯ್ಯನವರ ತಮ್ಮ ಶಿವರಾಜು ಎಂದರೆ ಮಧ್ಯದ ಮಗ ಎಂದು ಹೇಳುತ್ತಾರೆ. ನಿ.ಡಿ.3 ರಲ್ಲಿರುವ ಫೋಟೋ ನನ್ನದು ಮತ್ತು ನನ್ನ ಮೈದುನ ಶಿವರಾಜುನದು. ನಿ.ಡಿ. 3 ರಂತೆ ನಾನು ಮತ್ತು ನನ್ನ ಮೈದುನ ಶಿವರಾಜು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ. 3. ರಂತೆ ಉಪನೊಂಣಾಧಿಕಾರಿಗಳ ಕಚೇರಿಯಲ್ಲಿ ನನ್ನ ಫೋಟೋ ತೆಗೆದಿದ್ದಾರೆ ಎಂದರೆ ಸರಿ. ಕಾಮಸಮುದ್ರ ಗ್ರಾಮದ ಸರ್ವೆ ನಂಬರ್ 42/9 ರಲ್ಲಿ 34 ಗುಂಟೆ ನಿ.ಡಿ. 3 ರಂತೆ ನನ್ನ ಹೆಸರಿಗೆ ಬಂದಿದೆ ಎಂದರೆ ಸರಿ. 49/3 ರಲ್ಲಿ 49 ಗುಂಟೆ, 13/2 ರಲ್ಲಿ 34 ಗುಂಟೆ ಶಿವರಾಜುರವರ ಹೆಸರಿಗೆ ವಿಭಾಗ ಮುಖೇನ ಬಂದಿದೆ ಎಂದರೆ ಸರಿ. ವಿಭಾಗ ಪತ್ರದಂತೆ ಶಿವರಾಜು ಖಾತೆ ಮಾಡಿಸಿಕೊಳ್ಳಲು ನಾನು ಪ್ರಮಾಣ ಪತ್ರದ ಮುಖೇನ ಅನುಮತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ ನಂತರ ಸಾಕ್ಷಿ ಸರಿ ಎಂದು ಹೇಳುತ್ತಾರೆ. ಸರ್ವೆ ನಂಬರ್ 40/10 ರಲ್ಲಿ ದಾವಾ ಷೆಡ್ಯೂಲ್ ಐಟಂ 10 ರ ಸ್ವತ್ತಿನಲ್ಲಿ 8 ಗುಂಟೆ ನನ್ನ ಗಂಡನ ಹಿಸ್ಸೆಗೆ ಬಂದಿತ್ತು ಎಂದರೆ ಸರಿ ಉಳಿಕೆ 20 ಗುಂಟೆ ಜಾನಕಿರವರ ಹೆಸರಿಗೆ ಬಂದಿತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 3 ನನ್ನ ಮಾವ ಮೈಲಾರನ ಕುಟುಂಬಕ್ಕೆ ಸೇರಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ 5 ರ ಸ್ವತ್ತು ನನ್ನ ಗಂಡ ಹೆಸರಿಗೆ ಬಂದಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 6 ಶಿವರಾಜುರವರಿಗೆ ಸೇರಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 7 ರಲ್ಲಿ ಸರ್ವೆ ನಂಬರ್ 34/7 ರಲ್ಲಿ 36 ಗುಂಟೆ ಪೈಕಿ 10 ಗುಂಟೆ ಜಾನಕಿ ಹೆಸರಿಗೆ ಬಂದಿದೆ ಎಂದರೆ ಮತ್ತು ಉಳಿಕೆ 26 ಗುಂಟೆ ಅನುಭೋಗದಲ್ಲಿ ಶಿವರಾಜುರವರ ಹೆಸರಿಗೆ ಬಂದಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 6 ಸರ್ವೆ ನಂಬರ್ 34/2 ರಲ್ಲಿ 25 ಗುಂಟೆ ನನ್ನ ಗಂಡನ ಹೆಸರಿಗೆ ಬಂದಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 8 ರಲ್ಲಿ ಶಿವರಾಜುರವರು ಅಕ್ಕಿ, ರಾಗಿ, ಗ್ರೈಂಡಿಗ್ ಮಿಲ್ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಷೆಡ್ಯೂಲ್ ಬಿ ಆಸ್ತಿಯಲ್ಲಿ 1 ಎಕರೆ 7 ಗುಂಟೆ ಪೈಕಿ 16 ಗುಂಟೆ ನನ್ನ ಗಂಡ ಮಹದೇವಯ್ಯನವರಿಗೆ ಬಂದಿದೆ ಎಂದರೆ ಸರಿ, 15 ಗುಂಟೆ ಸೋಮಶೇಖರವರಿಗೆ ಹೋಗಿದೆ ಎಂದರೆ ಸರಿ ಮತ್ತು ಉಳಿದ 16 ಗುಂಟೆ ಶಿವರಾಜುರವರಿಗೆ ಹೋಗಿದೆ ಎಂದರೆ ಸರಿ. ನನ್ನ

ಗಂಡ ಮತ್ತು ಅವರ ಜೊತೆ ಹುಟ್ಟಿದ್ದ ಅಣ್ಣತಮ್ಮಂದಿರುಗಳು 1958 ರಲ್ಲಿ ಭಾಗ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸರಿ. ನನಗೆ ಮಕ್ಕಳು ಇಲ್ಲದೇ ಇದ್ದುದರಿಂದ ಉಮೇಶನನ್ನು ದತ್ತು ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಆಸ್ತಿಯನ್ನು ರಾಣಿಗೆ ಬಿಟ್ಟುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಸುಪರ್ದಿನಲ್ಲಿದೆ ಇದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು ಕಾಮಸಮುದ್ರಕ್ಕೆ ಹೋದರೆ ರಾಣಿಯಲ್ಲಿ ಹೊಂದಿಕೊಳ್ಳುತ್ತೇನೆ. ಕಾಮಸಮುದ್ರದಿಂದ ರಾಣಿಯವರು ನಮ್ಮ ಮನೆಗೆ ಬಂದರೆ ನಮ್ಮ ಮನೆಯಲ್ಲೆ ಉಳಿದುಕೊಳ್ಳುತ್ತಾರೆ. ರಾಣಿ ಕಾಮಸಮುದ್ರಕ್ಕೆ ಬಂದರೆ ಶಿವರಾಜು ಮತ್ತು ಸೋಮಶೇಖರವರ ಮನೆಗಳಿಗೆ ಹೋಗುವುದಿಲ್ಲ. ಉಮೇಶನನ್ನು ದತ್ತು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯೆಲ್ಲಾ ಉಮೇಶನಿಗೆ ಸೇರಿದೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಉಮೇಶನನ್ನು ನಾನು ದತ್ತು ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಕಾರ್ತಿಕನನ್ನು ನಾನು ದತ್ತು ತೆಗೆದುಕೊಂಡಾಗ 14 ವರ್ಷ ಆಗಿತ್ತು ನನಗೆ ಈಗ 77 ವರ್ಷ. ಕಾರ್ತಿಕನನ್ನು ದತ್ತು ತೆಗೆದುಕೊಳ್ಳುವ ಸನ್ನಿವೇಶ ಬರುವುದಿಲ್ಲ ಎಂದರೆ ಸರಿಯಲ್ಲ. ಕಾರ್ತಿಕನನ್ನು ದತ್ತು ತೆಗೆದುಕೊಳ್ಳುವ ಪೂರ್ವದಲ್ಲಿ ರಾಣಿರವರ ಕುಟುಂಬಕ್ಕೆ ಲಿಖಿತ ನೋಟಿಸ್ ನಾನು ಕೊಟ್ಟಿಲ್ಲ. ಉಮೇಶನನ್ನು ದತ್ತು ತೆಗೆದುಕೊಡಿಂರುವ ವಿಚಾರ ಗೊತ್ತಿದ್ದರೂ ರಾಣಿರವರ ಮಾತು ಕೇಳಿ ಕಾರ್ತಿಕನನ್ನು ದತ್ತು ತೆಗೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಣಿರವರಿಗೂ ಈ ವಿಚಾರ ಗೊತ್ತಿದ್ದರೂ ಶಿವರಾಜುನ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಶಿವರಾಜುರವರ ಆಸ್ತಿಯಲ್ಲಿ ಪಾಲು ಬೇಕೆಂದು ಹಾಕಿದ್ದಾರೆ. ರಾಣಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು. ರಾಣಿರವರಿಗೆ ಒಬ್ಬನೇ ಗಂಡು ಮಗ ಇರುವುದರಿಂದ ನನಗೆ ಕಾರ್ತಿಕನನ್ನು ದತ್ತು ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಶಿವರಾಜುನ ಆಸ್ತಿಯಲ್ಲಿ ನನಗೆ ಮತ್ತು ವಾದಿಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**